# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ23 ರ ನಾಗವಾರಕ್ಕೆ ಸಂಬಂಧಿಸಿದಂತೆ ದಿನಾಂಕ: 19.12.2020 ರಂದು ಶ್ರೀ.ಪ್ರಭು ಮಡ್ಡಿತೋಟ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಮತ್ತು ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

1. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಬೆಸ್ಕಾಂ E-1 ಉಪವಿಭಾಗ
2. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಬೆಸ್ಕಾಂ E-9 ಉಪವಿಭಾಗ
3. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು BWSSB ಹೆಚ್.ಬಿ.ಆರ್ ಸೇವಾ ಠಾಣೆ
4. ಕೆ.ಜಿ ಹಳ್ಳಿ ಪೋಲೀಸ್ ಠಾಣಾ ಅರಕ್ಷಕರು
5. ಡಾ.ಶ್ರೀ ಶ್ರೇನಿಕ್ ಕೆ.ಜಿ ಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಡಿಕಲ್ ಆಫೀಸರ್
6. ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು
7. ಶ್ರೀಮತಿ ಇರ್ಷಾದ್ ಬೇಗಂ ಮಾಜಿ ಬಿಬಿಎಂಪಿ ಸದಸ್ಯರು ನಾಗವಾರ ವಾರ್ಡ್ ಸಂಖ್ಯೆ-23
8. ಶ್ರೀ.ವಿಲಿಯಮ್ಸ್ ಮಾಜಿ ನಾಮ ನಿರ್ದೇಶಿತ ಸದಸ್ಯರು ವಾರ್ಡ್ ಸಂಖ್ಯೆ23
9. ಬಿ.ಬಿ.ಎಂ.ಪಿ ಹೊಲಿಗೆ ಕೇಂದ್ರದಲ್ಲಿ ಹೊಲಿಗೆ ತರಬೇತಿ ನೀಡುವ ಶಿಕ್ಷಕಿಯವರು
10. ಶ್ರೀ.ಮೊಹಮ್ಮದ್ ಇಬ್ರಾಹಿಂ (NRWA) & ಸಾರ್ವಜನಿಕರು

ಸಭೆಯ ಅಧ್ಯಕ್ಷರು, ಕಾರ್ಯದರ್ಶಿಗಳು ಸಮಿತಿಯ ಸದಸ್ಯರು ಮತ್ತು ಮೇಲ್ಕಂಡ ಅಧಿಕಾರಿಗಳ ಸಮ್ಮುಖದಲ್ಲಿ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳು ಈ ಕೆಳಕಂಡಂತಿವೆ, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು ಮತ್ತು ಸದಸ್ಯರನ್ನು ಸ್ವಾಗತ ಕೋರುವುದರ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು. ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಈ ಹಿಂದೆ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳನ್ನು ಅಧಿಕಾರಿಗಳ ಗಮನಕ್ಕೆ ತಂದಿರುವುದಾಗಿ ತಿಳಿಸಿದರು.

- ಕುಡಿಯುವ ಕಾವೇರಿ ನೀರಿನ ಸಮಸ್ಯೆಯ ಬಗ್ಗೆ ಚರ್ಚಿಸಲಾಯಿತು. ವಾರ್ಡಿನ ಕೆಲವು ಭಾಗಗಳಲ್ಲಿ ಕುಡಿಯುವ ಕಾವೇರಿ ನೀರಿನ ಸಮಸ್ಯೆ ಇದ್ದು ಕಾವೇರಿ ನೀರು ಬರುವ ದಿನದಂದು ಸಮಸ್ಯೆ ಇರುವ ಭಾಗಗಳಲ್ಲಿ ಭೇಟಿ ನೀಡಿ ಸಮಸ್ಯೆ ಬಗೆಹರಿಸಲು ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜಿ.ಎಲ್.ಆರ್ ನಿರ್ಮಾಣ ಕಾಮಗಾರಿಯು ಭಾಗಶಃ ಪೂರ್ಣಗೊಂಡಿದ್ದು, ಮುಂದಿನ 15 ದಿನಗಳ ಒಳಗಾಗಿ ನೀರು ಪೂರೈಸಲು ಪ್ರಾರಂಭಿಸಲಾಗುವುದು ನಂತರ ವಾರ್ಡಿನಲ್ಲಿ ನೀರಿನ ಸಮಸ್ ಬಗೆಹರಿಯುತ್ತದೆ ಎಂದು ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

- ವಾರ್ಡಿನಲ್ಲಿ ಕಸ ವಿಲೇವಾರಿ ಸಮಸ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ದುರ್ವಾಸನೆಯಿಂದ ರಸ್ತೆಯ ಸಾರ್ವಜನಿಕರು ಓಡಾಡಲು ತುಂಬಾ ಕಷ್ಟವಾಗುತ್ತಿದೆ. ಉದಾ: ಶಾಂಪುರ ರೈಲ್ವೆ ಗೇಟ್/ ಅಂಬೇಡ್ಕ ಕಾಲೇಜ್ ಹತ್ತಿರ/ ಲಿಡ್ಕರ್ ಕಾಲೋನಿ/ ಈ ಸ್ಥಳಗಳಲ್ಲಿ ಕಸ ಹೆಚ್ಚಾಗಿರುವುದರಿಂದ ಅದನ ತೆರವುಗೊಳಿಸಲು ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತರಲಾಯಿತು.